SC 1/2025
PW-1

ಸಾಕ್ಷಿಯನ್ನು ದಿಃ 04-07-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ವಿ ಹೆಚ್ ಎಮ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿರುವ ಎಲ್ಲ ವಿಷಯಗಳನ್ನು ನಾನೇ ಹೇಳಿ ಬರೆಯಿಸಿದ್ದು, ಸದರಿ ವಿಷಯಗಳು ಸರಿಯಾಗಿದ್ದು, ಸತ್ಯವಾಗಿರುತ್ತವೆ ಎಂದು ಪ್ರಮಾಣಿಕರಿಸುತ್ತೇನೆ.

ವಾದಿ ಬ್ಯಾಂಕಿನವರು ನೀಡಿದ ಅಧಿಕಾರ ಪತ್ರ ನಿಪಿಃ1 ಎಂದು, Loan Saction letter ನಿಪಿಃ2 ಎಂದು, ರಶೀದಿ ನಿಪಿಃ3 ಎಂದು, ಅಡಮಾನ ಪತ್ರ ನಿಪಿಃ4 ಎಂದು, ಗ್ಯಾರಂಟಿ ಅಗ್ರಿಮೆಂಟ್ ನಿಪಿಃ 5 ಎಂದು, ಸಾಲ ತಿರುವಳಿ ಪತ್ರ ನಿಪಿಃ 6 ಎಂದು, ಓ ಓ ಡಿ ರಶೀದಿ ನಿಪಿಃ7 ಎಂದು, ಪ್ರತಿವಾದಿಯ Statement of Accounts ಪ್ರತಿ ನಿಪಿಃ 8 ಎಂದು, ಪ್ರತಿವಾದಿಯರಿಗೆ ನೀಡಿದ ನೋಟಿಸ, ವಾಪಸ್ಸ ಬಂದ ಅಂಚೆ ಲಕೋಟೆಗಳನ್ನು ತೆರೆದು ನೋಡಿದ್ದು, ಅದರಲ್ಲಿರುವ ಮೂಲ ನೊಟೀಸಗಳನ್ನು ನಿಪಿಃ9 ಮತ್ತು 10 ಎಂದು, ಅಂಚೆ ಲಕೋಟಗಳನ್ನು ನಿಪಿಃ9(ಎ), 10(ಎ) ಎಂದು ಗುರುತಿಸಿದೆ.

ಕಾರಣ ದಾವೆಯಲ್ಲಿ ಕೇಳಿದಂತೆ ಪರಿಹಾರ ನೀಡಲು ವಿನಂತಿಸಿಕೊಳ್ಳುತ್ತೇನೆ.

(ಪ್ರತಿವಾದಿಯ ನಂ.2 ಏಕತರ್ಫಿ ಇದ್ದು, ಪ್ರತಿವಾದಿ ನಂ.1 ಗೈರು ಹಾಜರಿದ್ದು, ಪ್ರತಿವಾದಿ ನಂ.1 ರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಪ್ರತಿವಾದ ಪತ್ರ ಸಲ್ಲಿಸದ ಕಾರಣ ಅವರ ವಿನಂತಿಯನ್ನು ತೀರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.